## ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ: ಬಿ2/ಜಿಎಫ್‌ಎಲ್/ಸಿಆರ್-01/2017-18.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ
ಕೆನರಾ ವೃತ್ತ,
ಶಿರಸಿ-581 402, ದಿನಾಂಕ: 18/03/2020.

ಇವರಿಗೆ,

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಸಂರಕ್ಷಣೆ), ಮತ್ತು ನೋಡಲ್ ಅಧಿಕಾರಿ (ಎಫ್‌ಸಿಎ),
ಅರಣ್ಯ ಭವನ, ಮಲ್ಲೇಶ್ವರಂ 18ನೇ ಅಡ್ಡ ರಸ್ತೆ,
ಬೆಂಗಳೂರು-560 003.

ಮಾನ್ಯರೇ,

ವಿಷಯ: Diversion of 0.307 ha of forest land in F.Sy.No.44A Baleguli village for approach road to proposed stone crusher in Baleguli Sy.No.1/1, 1/2, 34, 1/3, 29/2 in favour of Sri. Narayan D Nayak, M/s Shantika Stone Crusher, Baleguli.

ಉಲ್ಲೇಖ:
1. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅಸಂಕಾ) ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ: ಎ5(2)/ಕ್ವಾರಿ/ಸಿಆರ್-1/2015-16 ದಿನಾಂಕ: 17-03-2018.
2. ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ ಇವರ ಕಛೇರಿ ಪತ್ರ ಸಂಖ್ಯೆ: ಬಿ4/ಜಿಎಫ್‌ಎಲ್/ಎಫ್‌ಸಿಎ/ಸಿಆರ್-17/2015-16 ದಿನಾಂಕ: 06/03/2020.
3. ಉಪ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರ) Ministry of Environment, Forests & Climate Change, Regional Office (Southern Zone) ಬೆಂಗಳೂರು ರವರ ಪತ್ರ ಸಂಖ್ಯೆ: F.No, 4-KRB 1149/2008-BAN/520 ದಿನಾಂಕ: 06-03-2018.

*******

ಬಾಳೇಗುಳಿ ಗ್ರಾಮದ ಮಾ.ಸ.ನಂ. Bl.No: 1, 2A, 2B & 3 (Sy.No: 1/1, 1/2, 34, 1/3, 29/2) ರಲ್ಲಿ ಮೆ: ಶಾಂತಿಕಾ ಕೃಷರ್ ಘಟಕ ಸ್ಥಾಪಿಸಲು ಬಯಸಿದ ಕ್ಷೇತ್ರಕ್ಕೆ ತಲುಪಲು ರಸ್ತೆ ನಿರ್ಮಿಸಲು, ಬಾಳೇಗುಳಿ ಅ.ಸ.ನಂ. 44ಎ ರಲ್ಲಿ 0.307 ಹೆ. ಅರಣ್ಯ ಭೂಮಿ ಬಿಡುಗಡೆ ಕುರಿತ ಪ್ರಸ್ತಾವನೆಯ ಕುರಿತು ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾರವಾರ ವಿಭಾಗ, ರವರು ಉಲ್ಲೇಖ (2)ರಲ್ಲಿ ವರದಿ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರವು ಸೂಕ್ಷ್ಮವಾಗಿ ಪರಿಶೀಲಿಸಿದ ನಂತರ, ಅರಣ್ಯ ಸಂರಕ್ಷಣೆಯ ಹಿತದೃಷ್ಟಿಯಿಂದ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಾಗುತ್ತಿಲ್ಲ ಎಂಬುದಾಗಿ ಉಲ್ಲೇಖ (3)ರಲ್ಲಿ ತಿಳಿಸಿದೆ. ಸದರಿ ಪ್ರಸ್ತಾಪಿತ ಅರಣ್ಯ ಪ್ರದೇಶವನ್ನು ವಲಯ ಅರಣ್ಯಾಧಿಕಾರಿ, ಅಂಕೋಲಾ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಂಕೋಲಾ ಉಪ ವಿಭಾಗ ರವರು ಸ್ಥಳೀಕವಾಗಿ ಪರಿಶೀಲಿಸಿರುತ್ತಾರೆ. ಸದರಿ ಕ್ಷೇತ್ರದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಉಲ್ಲಂಘನೆ ಮಾಡಿ ಯಾವುದೇ ಅರಣ್ಯೇತರ ಚಟುವಟಿಕೆಗಳನ್ನು ಕೈಗೊಂಡಿದ್ದು ಇರುವುದಿಲ್ಲ. ಉಲ್ಲೇಖ (3)ರಲ್ಲಿ ತಿಳಿಸಿರುವ ಕಾರಣದಿಂದ ಸದರ ಪ್ರಸ್ತಾವನೆಯನ್ನು ಮುಕ್ತಾಯಗೊಳಿಸಬಹುದಾಗಿದೆ ಎಂಬುದಾಗಿ ವರದಿಸುತ್ತಾ, ಸದರಿ ಸ್ಥಳದ ಪಂಚನಾಮೆ, ವಲಯ ಅರಣ್ಯಾಧಿಕಾರಿ ಅಂಕೋಲಾ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅಂಕೋಲಾ ಉಪ ವಿಭಾಗ ಅಂಕೋಲಾ ರವರ ವರದಿಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ, ಕಾರವಾರ ರವರ ವರದಿಯ ಅನುಸಾರ, ಸದರಿ ಕಡತವನ್ನು ಮುಕ್ತಾಯಗೊಳಿಸಬಹುದಾಗಿದೆ ಹಾಗೂ ಸದರಿಯವರು ಸಲ್ಲಿಸಿರುವ ವರದಿ ಹಾಗೂ ಅಡಕವನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಗೌರವಪೂರ್ವಕ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಕೆನರಾ ವೃತ್ತ, ಶಿರಸಿ.

ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ, ಕಾರವಾರ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.